ದಿ: ೧೬.೧೨.೨೦೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

<u>**ಪಾಟೀ ಸವಾಲು:**</u> ಪ್ರತಿವಾದಿ ಪರವಾಗಿ ಶ್ರೀ ಎ.ಜಿ.ಎನ್. ವಕೀಲರಿಂದ

ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಬರುವುದಿಲ್ಲ. ನಮ್ಮ ತಂದೆಯ ಹೆಸರು ನಾರಾಯಣಸ್ವಾಮಿ. ಅವರು ಬೈಯಮ್ಮನ ಮಗ. ಬೈಯಮ್ಮರವರ ಕುಟುಂಬದ ಮೂಲ ಪುರಷ ಜೋಗಪ್ಪ ಎಂದರೆ ನನಗೆ ಗೊತ್ತಿಲ್ಲ. ಜೋಗಪ್ಪನಿಗೆ ಎಷ್ಟು ಜನ ಮಕ್ಕಳು ನನಗೆ ಗೊತ್ತಿಲ್ಲ. ಅವರಿಗೆ ದೊಡ್ಡಮುನಿಶ್ಯಾಮಿ, ಚಿಕ್ಕಮುನಿಶ್ಯಾಮಿ, ಮುನಿಯಪ್ಪ ಎಂಬ ಮೂರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ಇವರು ಬೈಯಮ್ಮನ ತಂದೆ ಎಂದರೆ ಸರಿ. ಮುನಿಯಪ್ಪನ ಅಣ್ಣ ತಮ್ಮಂದಿರ ಬಗ್ಗೆ ನನಗೆ ಗೊತ್ತಿಲ್ಲ. ಮುನಿಯಪ್ಪನಿಗೆ ಒಬ್ಬಳೇ ಮಗಳು, ಗಂಡು ಮಕ್ಕಳು ಇಲ್ಲ ಎಂದರೆ ಸರಿ.

ಜೋಗಪ್ಪನ ಮಕ್ಕಳು ಜಮೀನಿನಲ್ಲಿ ಭಾಗ ಮಾಡಿಕೊಂಡಿರುವ ಕುರಿತು ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ದಾವೆ ಸಲ್ಲಿಸಿ, ವಿಭಾಗ ಮಾಡಿಕೊಂಡಿರುವ ಕುರಿತು ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ದಾವೆ ಸಲ್ಲಿಸಿ, ವಿಭಾಗ ಮಾಡಿಕೊಂಡಿದ್ದರು, ಅಂತಿಮ ಡಿಕ್ರಿ ಮಾಡಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ಮತ್ತು ಅವರ ಸಹೋದರರ ಮಧ್ಯೆ ದಾವೆ ನಂ.೫೨೫-೧೯೬೨ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಜೋಗಪ್ಪನ ಮಕ್ಕಳಿಗೆ ಸಮಪಾಲು ಎಂದು ಡಿಕ್ರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಡಿಕ್ರಿ ಆಗಿರುವ ವಿಷಯ ನನಗೆ ಗೊತ್ತಿದ್ದರು, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಣ್ಣ ತಮ್ಮಂದಿರ ಮಧ್ಯೆ ವಿಸ್ತೀರ್ಣ ಖಚಿತವಾಗದೇ ಇದ್ದರೂ ಅವರೇ ತಮ್ಮ ಸಹಮತಿಯ ಮೇರೆಗೆ ಕೆಲವೊಂದು ಕ್ಷೇತ್ರದಲ್ಲಿ ಹುಳುಮೆ ಮಾಡಿಕೊಂಡು ಪಹಣಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಸರ್ವೆ ನಂ.೩/೨ಬಿ೬ ಇರುತ್ತದೆ. ಹಳೇ ನಂಬರ್ ೩/೨ ಎಂದರೆ ಸರಿ. ಅದರ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಅದು ೨ ಎಕರೆ ೬ ಗುಂಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ೨೭ ಗುಂಟೆ ಹರಿಜನ ಕಾಲೋನಿಗೆ ಮಂಜೂರಾಗಿ ಅದರಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಸರ್ಕಾರ ಹರಿಜನ ಕಾಲೋನಿಗೆ ೨೭ ಗುಂಟೆ ಸ್ವಾಧೀನ ಮಾಡಿಕೊಂಡ ನಂತರ ೧ ಎಕರೆ ೧೯ ಗುಂಟೆ ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ. ಹರಿಜನ ಕಾಲೋನಿಗೆ ೧೯೫೨ ರಲ್ಲಿಯೇ ಸ್ವಾಧೀನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ೨೭ ಗುಂಟೆ ಸ್ವಾಧೀನ ಗೊಂಡಿದ್ದರು ಸಹ ಜೋಗಪ್ಪನ ಮಕ್ಕಳು ಅದನ್ನು ಸೇರಿಸಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಜೋಗಪ್ಪನ ಮೂರು ಜನ ಮಕ್ಕಳು ವಿಭಾಗ ಆಗದೇ ಇರುವ ಕಾರಣ ಸದರಿ ಜಮೀನ್ನನ್ನು ಅವರ ಒಪ್ಪಿಗೆ ಮೇರೆಗೆ ಪೂರ್ವ ಪಶ್ಚಿಮವಾಗಿ ಮೂರು ಭಾಗಗಳನ್ನಾಗಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಹರಿಜನ ಕಾಲೋನಿಗೆ ಸ್ವಾಧೀನಗೊಂಡಿರುವ ಆಸ್ತಿಗಳನ್ನು ಸೇರಿಸಿ ಮೂರು ಜನಗಳು ಭಾಗ ಮಾಡಿಕೊಂಡಿದ್ದು, ಅದರಂತೆ ಚಿಕ್ಕಮುನಿಶ್ಯಾಮಿಗೆ ೨೫ ಗುಂಟೆ, ನಂಜಪ್ಪನಿಗೆ ೭೯ ಗುಂಟೆ, ಮುನಿಯಪ್ಪನಿಗೆ ೭೯ ಗುಂಟೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಅವರ ಹೆಸರಿಗೆ ಮ್ಯುಟೇಷನ್ ಮತ್ತು ಪಹಣಿಗಳು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ಮಾಡಿಕೊಂಡಿದ್ದರಿಂದ ಡಿ.ಡಿ.ಎಲ್.ಆರ್. ಮುಂದೆ ನಂಜಪ್ಪ ಮತ್ತು ಅವರ ಮಕ್ಕಳು ನಮ್ಮ ವಿರುದ್ಧ ಅಪೀಲು ನಂಬರ್ ೮೪/೨೦೧೩-೧೪ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ನಾವೆಲ್ಲರೂ ಹಾಜರಾಗಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಾನು ಹೋಗಿರಲಿಲ್ಲ ತನ್ನ ತಂದೆ ಹೋಗಿದ್ದರು ಎನ್ನುತ್ತಾರೆ.

ದಿ:೨೦.೦೩.೨೦೧೬ ರಂದು ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಸರ್ವೆ ನಂ.೩/೨ ರಲ್ಲಿ ಆಗಿರುವ ಎಲ್ಲಾ ಹಿಸ್ಸೆಗಳನ್ನು ಮತ್ತು ಪಹಣಿಗಳನ್ನು ರದ್ದುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಆದೇಶದ ನಂತರ ಸದರಿ ಜಮೀನಿನಲ್ಲಿ ಉಳುಮೆ ಮಾಡುವವರ ಎಲ್ಲರ ಹೆಸರು ಜಂಟಿ ಆಗಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನೀವು ಜೆ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ತಮ್ಮ ತಂದೆ ಸಲ್ಲಿಸಿದ್ದಾರೆ ಎನ್ನುತ್ತಾರೆ. ಸದರಿ ಅಪೀಲನ್ನು ವಜಾಗೊಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ೩/೨ರಲ್ಲಿ ೨೭ ಗುಂಟೆ ಸ್ವಾಧೀನವನ್ನು ಹೊರತುಪಡಿಸಿ, ಮೂರು ಜನರಿಗೆ ತಲಾ ೧೯ ಗುಂಟೆ ಜಮೀನು ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ಇವರು ಕೇವಲ ೧೯ ಗುಂಟೆಗೆ ಹಕ್ಕುವುಳ್ಳವರಾಗಿದ್ದು, ಬೈಯಮ್ಮ ಇವರಿಗೆ ೧ ಎಕರೆ ೧೮ ಗುಂಟೆ ಆಸ್ತಿಗೆ ದಾನ ಪತ್ರ ಮಾಡಲು ಅಧೀಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹಾಗೇ ಹಕ್ಕು ಇಲ್ಲದೇ ಇರುವುದರಿಂದ ಇವತ್ತಿನವರೆಗೂ ಬೈಯಮ್ಮನ ಹೆಸರಿಗೆ ಯಾವುದೇ ದಾಖಲೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮುನಿಯಪ್ಪ ಹೆಸರಿಗೂ ಕೂಡ ೧ ಎಕರೆ ೧೮ ಗುಂಟೆ ವಿಸ್ತಿರ್ಣಕ್ಕೆ ರೆವಿನ್ಯೂ ದಾಖಲೆಗಳು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಆಗದೇ ಇರುವುದರಿಂದ ನ್ಯಾಯಾಲಯಕ್ಕೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಬೈಯಮ್ಮ ರವರ ಹೆಸರಿಗೆ ೧ ಎಕರೆ ೧೮ ಗುಂಟೆ ಆಗಿರುವ ಕುರಿತು ಪಹಣಿಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಕೊಟ್ಟರಬಹುದು ಎನ್ನುತ್ತಾರೆ. ಅವರಿಗೆ ಅಷ್ಟು ವಿಸ್ತಿರ್ಣಕ್ಕೆ ಹಕ್ಕು ಇಲ್ಲದಿದ್ದರು ಸಹ ನಾವು ಸದರಿ ದಾನ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.೨ರಲ್ಲಿ ನಮೂದಿಸಿದಂತೆ ಪೂರ್ವ ಪಶ್ಚಿಮವಾಗಿ ವಿಭಾಗ ಮಾಡಿಕೊಳ್ಳಲಾಗಿದ್ದರೂ ಸಹ ಉತ್ತರ ದಕ್ಷಿಣವಾಗಿ ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ಸ್ಕೆಚ್ ಮಾಡಿಸಬೇಕಾದರೆ ಪ್ರತಿವಾದಿಯರ ಜಾಗೆಯನ್ನು ತೋರಿಸಿ , ಸ್ಕೆಚ್ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಹಾಗೆ ಸ್ಕೆಚ್ ಮಾಡಿಸಿ, ಅವರ ಆಸ್ತಿಯನ್ನು ಉಳುಮೆ ಮಾಡಲು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ. ಆದ ಕಾರಣಕ್ಕೆ ಅವರು ನಮ್ಮ ವಿರುದ್ದ ಸಿವಿಲ್ ದಾವೆಯನ್ನು ಓ.ಎಸ್.೨೨೪-೧೦ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಇನ್ನು ಚಾಲ್ತಿಯಲ್ಲಿದ್ದು, ಅದರಲ್ಲಿ ನನ್ನನ್ನು ಪಕ್ಷಗಾರಳನ್ನಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ನೋಡಿಕೊಳ್ಳುತ್ತಾರೆ. ಪ್ರಕರಣವನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದುದ್ದರಿಂದ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. ಎಷ್ಟು ವಿಸ್ತಿರ್ಣಕ್ಕೆ ದಾನ ಪತ್ರ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ದಾನ ಪತ್ರದಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ನಾನು ಯಾವತ್ತಿಗೂ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ಖಾಲಿ ಇದೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸಿದಾಗಿನಿಂದ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ರಾಗಿ ಬೆಳೆ ಬೆಳೆದಿದ್ದಾರೆ ಎಂದರೆ ಸರಿಯಲ್ಲ. ಅವರು ಬೆಳೆದ ಬೆಳೆಯನ್ನು ನಾವು ಕಟಾವು ಮಾಡಲು ಪ್ರಯತ್ನಿಸಿದೆವು ಎಂದರೆ ಸರಿಯಲ್ಲ. ಆಗ ನಾವು ಪೊಲೀಸ ರಕ್ಷಣೆ ಕೋರಿ ಅರ್ಜಿ ಸಲ್ಲಿಸಿದೇವು ಎಂದರೆ ಸರಿಯಲ್ಲ. ಅಷ್ಟೊತ್ತಿಗೆ ಅವರು ಬೆಳೆಯನ್ನು ಕಟಾವು ಮಾಡಿದ್ದರಿಂದ ಅರ್ಜಿ ವಜಾಗೊಂಡಿದೆ ಎಂದರೆ ಸರಿಯಲ್ಲ.

೧ನೇ ಪ್ರತಿವಾದಿಗೆ ೨೫ ಗುಂಟೆ ವಿಸ್ತಿರ್ಣಕ್ಕೆ ಅವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ೧೯ ಗುಂಟೆಯ ಹೊರತಾಗಿ ೨೫ ಗುಂಟೆ ಎಂದು ಅವರ ಹೆಸರಿಗೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಅವರು ಇವತ್ತಿನವರೆಗೂ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಜಮೀನು ಕಬಳಿಸುವ ಉದ್ದೇಶದಿಂದ ದಾನ ಪತ್ರ ಮತ್ತು ಸ್ಕೆಚ್ ಅನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾನ ಪತ್ರದಲ್ಲಿ ನಮೂದಿಸಿದಂತ ವಿಸ್ತೀರ್ಣಕ್ಕೆ ಪಹಣಿ ಈಗ ರದ್ದುಗೊಂಡು ಎಲ್ಲಾ ಒಟ್ಟುಗೂಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.೨ ರಿಂದ ೭ ರವರೆಗಿನ ದಾಖಲೆಗಳು ಈಗ ಅಸ್ತಿತ್ವದಲ್ಲಿಲ್ಲ ರದ್ದುಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿದ್ದರು, ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ವಿಸ್ತಿರ್ಣಕ್ಕೆ ನಾನು ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಪ್ರತಿವಾದಿಗಳು ತೊಂದರೆ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರು ಅವರ ಅಣ್ಣ ತಮ್ಮಂದಿರ ಮಧ್ಯೆ ಆಗಿರುವ ಪೂರ್ವ ಪಶ್ಚಿಮವಾಗಿ ವಿಭಾಗದಂತೆ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಸ್ವಾಧೀನದಲ್ಲಿರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಪಿ.೧ ಮತ್ತು ೨ ಸೃಷ್ಟಿಸಿಕೊಂಡು ಅವರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)**

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**